# ಸಕಾಲಿಕ ಚಿಕಿತ್ಸೆಯಿಂದ ಎರಡು ಗಂಭೀರ ಸಮಸ್ಯೆಗಳ ಪರಿಹಾರ

"ಸರಾಗ ಮೂತ್ರವಿಸರ್ಜನೆ ಸಾಧ್ಯವಾಗದೇ ನನ್ನ ತಂದೆ ಬಹಳ ಮುಜುಗರ ಅನುಭವಿಸುತ್ತಿದ್ದರು. ಸಮೀಪದ ಆಸ್ಪತ್ರೆಯ ವೈದ್ಯರು ಯಾವುದೇ ಚಿಕಿತ್ಸೆ ಸೂಚಿಸದೇ, ಅವರಿಗೆ ಕೇಥಿಟರ್ (ಮೂತ್ರ ಹೊರ ಹಾಕುವ ನಳಿಕೆ) ಹಾಕಿದ್ದರಿಂದಾಗಿ ಈ ಸಮಸ್ಯೆ ಒಂದು ತಿಂಗಳು ಮುಂದುವರಿಯಿತು. ಫೋರ್ಟಿಸ್‌ನಲ್ಲಿ ಅವರಿಗೆ ಪ್ರಾಸ್ಟೇಟ್ ಗ್ರಂಥಿಯ ಹಿಗ್ಗುವಿಕೆಗಾಗಿ ಲೇಸರ್ ಟಿಯುಆರ್‌ಪಿ ಚಿಕಿತ್ಸೆ ದೊರಕಿತಲ್ಲದೇ ಗಮನಕ್ಕೆ ಬಾರದಿದ್ದ ಹೃದಯ ಸಂಬಂಧಿತ ಸಮಸ್ಯೆಯನ್ನೂ ಪರಿಹರಿಸಲು ಸಾಧ್ಯವಾಯಿತು"

ಅನೇಕ ಆಸ್ಪತ್ರೆಗಳು ಅಧಿಕ ರಿಸ್ಕ್‌ನ ರೋಗಪೀಡಿತರ ನಿರ್ವಹಣೆಯಲ್ಲಿ ಅನುಭವ ಮತ್ತು ಪರಿಣತಿ ಹೊಂದಿರುವುದಿಲ್ಲವಾದ್ದರಿಂದ, ಹಲವು ವೈದ್ಯಕೀಯ ಸಮಸ್ಯೆಗಳಿಂದ ಬಳಲುತ್ತಿರುವ ರೋಗಿಗಳು ಒಂದು ಆಸ್ಪತ್ರೆಯಿಂದ ಮತ್ತೊಂದಕ್ಕೆ ಅಲೆದಾಡಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ಅಂತಹಾ ಸಂದರ್ಭಗಳಲ್ಲಿ ರೋಗಪೀಡಿತರು ಮತ್ತು ಅವರ ಬಂಧುಗಳು ಹತಾಶರಾಗಿ ಸದ್ದಿಲ್ಲದೇ ಸಂಕಟ ಅನುಭವಿಸುತ್ತಾರೆ.

61 ವರ್ಷದ ಫೈರೋಜ್ ಗೆ ಪ್ರಾಸ್ಟೇಟ್ ಗ್ರಂಥಿಯ ಹಿಗ್ಗುವಿಕೆ ಪತ್ತೆಯಾದಾಗ, ಆ ವಯೋವೃದ್ಧ ಒಂದು ತಿಂಗಳು ತೀವ್ರ ಮುಜುಗರಕ್ಕೆ ಈಡಾಗಬೇಕಾಯಿತು. ಆ ಸಮಯದಲ್ಲಿ ಆತನಿಗೆ ಮೂತ್ರಕೋಶದಲ್ಲಿ ಕಲ್ಲುಗಳಿರುವ ವಿಷಯ ತಿಳಿದೇ ಇರಲಿಲ್ಲ. ಅದರೊಂದಿಗೆ ಒಂದು ಹೃದಯ ಸಂಬಂಧಿತ ಸಮಸ್ಯೆಯೂ ಸೇರಿ ಆತ ಓರ್ವ ಸಂಕೀರ್ಣ ರೋಗಿಯಾಗಿದ್ದರೂ. ಕಡೆಗೆ ಆತ ಫೋರ್ಟಿಸ್ ಆಸ್ಪತ್ರೆಗೆ ಬಂದಾಗ, ಕರೋನರಿ ಆರ್ಟರಿಯ ಬೈಪಾಸ್ ಗ್ರಾಫ್ಟ್ ಶಸ್ತ್ರ ಚಿಕಿತ್ಸೆ ಹಾಗೂ ಪ್ರಾಸ್ಟೇಟ್ ಸಮಸ್ಯೆಗಾಗಿ ಒಂದು ಕನಿಷ್ಟ ಛೇದ ಚಿಕಿತ್ಸಾ ವಿಧಾನ ಅವರ ನೆರವಿಗೆ ಬಂದಿತು.

ಫೈರೋಜ್ ಅಬ್ಬಾಸ್ ಅವರಿಗೆ ಮೂತ್ರ ವಿಸರ್ಜನೆಯಲ್ಲಿ ಕೊಂಚ ತೊಂದರೆ ಉಂಟಾಗುತ್ತಿತ್ತು, ಮೊದಮೊದಲು ಅವರು ಅದನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ ಅದೊಂದು ರಾತ್ರಿ ಅವರ ಮೂತ್ರ ವಿಸರ್ಜನೆ ಪೂರ್ತಿ ಸ್ಥಗಿತಗೊಂಡು ರಾತ್ರಿ ಇಡೀ ನಿದ್ರಿಸಲಾಗದೇ ಅಸಾಧ್ಯ ನೋವು ಮತ್ತು ಸಂಕಟ ಅನುಭವಿಸಬೇಕಾಯಿತು.

ಮರುದಿನ ಬೆಳಗ್ಗೆ ಸಮೀಪದ ಆಸ್ಪತ್ರೆಗೆ ಹೋದಾಗ ಅಲ್ಲಿನ ವೈದ್ಯರು ಕೆಲವೊಂದು ಪರೀಕ್ಷೆಗಳನ್ನು ನಡೆಸಿ, ಅವರಿಗೆ ಪ್ರಾಸ್ಟೇಟ್‌ನ ಹಿಗ್ಗುವಿಕೆಯ ಸಮಸ್ಯೆ ಇರುವುದರಿಂದ ಮೂತ್ರ ವಿಸರ್ಜನೆ ಸಾಧ್ಯವಾಗುತ್ತಿಲ್ಲವೆಂದು ತಿಳಿಸಿ, ಅವರಿಗೆ ಕೇಥಿಟರ್ ಮತ್ತು ಮೂತ್ರದ ಚೀಲ ಅಳವಡಿಸಿದರೇ ವಿನಹ ಬೇರೆ ಏನು ಚಿಕಿತ್ಸೆ ನೀಡಲಿಲ್ಲ.

ಮುಂದಿನ ಒಂದು ತಿಂಗಳು ಅವರ ಪಾಲಿಗೆ ಅತ್ಯಂತ ಕಷ್ಟಕರ ಮತ್ತು ಯಾತನಾಮಯವಾಯಿತು. ವ್ಯಾಪಾರಿಯಾಗಿದ್ದ ಅವರಿಗೆ ತನ್ನ ನಿತ್ಯದ ಚಟುವಟಿಕೆಗಳಲ್ಲಿ ತೊಡಗಲೂ ಆಗಲಿಲ್ಲ. ಮೂತ್ರ ವಿಸರ್ಜನೆ ವೈಫಲ್ಯ ಹಾಗೆಯೆ ಇತ್ತು.

"ಮೂತ್ರ ವಿಸರ್ಜನೆಯ ತೊಂದರೆಯಿಂದಾಗಿ ನನ್ನ ತಂದೆ ತೀವ್ರ ಮುಜುಗರ ಅನುಭವಿಸಿದರು ಇದರೊಂದಿಗೆ ಅಪಾರವಾದ ನೋವು ಸಹ ಇತ್ತು. ಇಷ್ಟೆಲ್ಲಾ ಸಂಭವಿಸಿದಾಗ ನಾನು ಊರಿನಲ್ಲಿ ಇರಲಿಲ್ಲ. ಒಂದು ರಾತ್ರಿ ಪರಿಸ್ಥಿತಿ ಬಹಳ ಉಲ್ಬಣಗೊಂಡು ಸಮೀಪದ ಆಸ್ಪತ್ರೆಯ ವೈದ್ಯರನ್ನು ಸಂಪರ್ಕಿಸಿದಾಗ ಅವರು ಮೂತ್ರ ವಿಸರ್ಜನೆ ಸರಾಗವಾಗಲು ಕೇಥಿಟರ್ ಅಳವಡಿಸಿದರು. ಆದರೆ ಸಮಸ್ಯೆಗೆ ಅದೇ ಪರಿಹಾರವಾಗಲಿಲ್ಲ. ನನ್ನ ತಂದೆ ಮೌನವಾಗಿ ಒಂದು ತಿಂಗಳು ಸಂಕಟ ಪಟ್ಟರು. ನಾನು ಬೆಂಗಳೂರಿಗೆ ಹಿಂದಿರುಗಿದಾಗ ಅವರನ್ನು ಕೂಡಲೇ ಫೋರ್ಟಿಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಡಾ.ಮೋಹನ್ ಕೇಶವ ಮೂರ್ತಿಯವರನ್ನು ಕಂಡೆ" ಎಂದು ಫೈರೋಜ್ ಅವರ ಪುತ್ರಿ ತಿಳಿಸಿದರು.

ವಿಸ್ತೃತ ಪರೀಕ್ಷೆಗಳ ನಂತರ ಅವರಿಗೆ ಬೆನಿನ್ ಪ್ರಾಸ್ಟಾಟಿಕ್ ಹೈಪರ್‌ಟ್ರೋಫಿ (ಬಿಪಿಹೆಚ್) ಎಂಬ ಸಮಸ್ಯೆ ಇರುವುದು ತಿಳಿದುಬಂತು. ಇದು ಸಾಮಾನ್ಯವಾಗಿ ವಯಸ್ಸಾದವರಲ್ಲಿ ಪ್ರಾಸ್ಟೇಟ್ ಗ್ರಂಥಿ ಹಿಗ್ಗಿದಾಗ ಕಂಡುಬರುತ್ತದೆ. ಈ ಹಿಗ್ಗುವಿಕೆ ಕ್ಯಾನ್ಸರ್‌ಕಾರಕ ಕೋಶಗಳ ಬೆಳವಣಿಗೆಯಿಂದ ಉಂಟಾಗುತ್ತದೆ. ಇದು ಬಹುಪಾಲು 40 ದಾಟಿದ ಪುರುಷರಲ್ಲಿ ಕಂಡುಬರುತ್ತದೆ. ಕಾಲಾಂತರದಲ್ಲಿ ತೊಂದರೆ ತೀವ್ರವಾದಲ್ಲಿ ಚಿಕಿತ್ಸೆ ಅಗತ್ಯವಾಗುತ್ತದೆ. ಇದರಿಂದ ಮೇಲಿಂದ ಮೇಲೆ ಮೂತ್ರನಾಳದ ಸೋಂಕು, ಮೂತ್ರವಿಸರ್ಜನೆಯಲ್ಲಿ ತೊಂದರೆ, ಕಿಡ್ನಿ ಕಲ್ಲಿನ ಸಮಸ್ಯೆ ಮತ್ತು ಮೂತ್ರಕೋಶದಿಂದ ಮೂತ್ರವು ಮೂತ್ರಪಿಂಡಕ್ಕೆ ವಾಪಸ್ಸು ಆಗುವುದು ಮುಂತಾದ ಸಮಸ್ಯೆಗಳು ಉಂಟಾಗಬಹುದು. ಈ ಸ್ಥಿತಿಗತಿಗಳನ್ನು ರೋಗಿಗೂ ಮತ್ತು ಆತನ ಕುಟುಂಬವರ್ಗದವರಿಗೂ ತಿಳಿಸಿ ಹೇಳಲಾಯಿತು. ಹಾಗೂ ಇದಕ್ಕಾಗಿ ಲೇಸರ್ ಟಿಯುಆರ್‌ಪಿ ಚಿಕಿತ್ಸೆ ಮಾಡಬಹುದೆಂದು ಸಲಹೆ ಮಾಡಲಾಯಿತು ಎಂದು ಫೋರ್ಟಿಸ್



ಆಸ್ಪತ್ರೆಯ ಸಲಹೆಗಾರ ಮೂತ್ರ ರೋಗ ತಜ್ಞ ಮತ್ತು ಕಸಿ ಸರ್ಜನ್‌ರಾದ ಡಾ. ಮೋಹನ್ ಕೇಶವ ಮೂರ್ತಿ ಹೇಳಿದರು.

ರೋಗಿಯ ಕುಟುಂಬದವರು ಅವರ ಸ್ಥಿತಿಗತಿಗಳನ್ನು ಮನಗಂಡು, ಲೇಸರ್ ಟಿಯುಆರ್‌ಪಿ ಚಿಕಿತ್ಸೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಮತ್ತೊಂದು ಆಘಾತಕರ ಸುದ್ದಿ ಸಿಡಿಲಿನಂತೆ ಬಂದೆರಗಿತು. ಶಸ್ತ್ರ ಚಿಕಿತ್ಸೆಗೆ ಮುಂಚಿನ ಪರೀಕ್ಷೆಗಳನ್ನು ನಡೆಸುವ ಸಂಧರ್ಭದಲ್ಲಿ ಫೈರೋಜ್ ಗಂಭೀರ ಸ್ವರೂಪದ ಹೃದಯದ ಸಮಸ್ಯೆಯಿಂದ ಬಳಲುತ್ತಿರುವುದು ಗಮನಕ್ಕೆ ಬಂತು. ಅವರ ಕರೋನರಿ ಆರ್ಟರಿಗಳಲ್ಲಿ ಹಲವಾರು ಅಡೆತಡೆಗಳಿರುವುದು ಆಂಜಿಯೋಗ್ರಾಮ್‌ನಿಂದ ಗೋಚರವಾಯಿತು. ಇದರಿಂದಾಗಿ ಫೈರೋಜ್ ಗಂಭೀರ ರಿಸ್ಕ್‌ನ ರೋಗಿಯೆಂದು ಪರಿಗಣಿಸಲ್ಪಟ್ಟು, ಬೇರೆ ಯಾವ ಚಿಕಿತ್ಸೆ ಕೈಗೊಂಡರೂ ಅಪಾಯ ತಪ್ಪಿದ್ದಲ್ಲ ಎಂಬ ಪರಿಸ್ಥಿತಿ ಉಂಟಾಯಿತು. ಲೇಸರ್ ಟಿಯುಆರ್‌ಪಿ ವಿಧಾನ ಕೈಗೊಳ್ಳುವ ಮೊದಲು ಈ ರಕ್ತನಾಳಗಳ ಅಡೆತಡೆಗಳನ್ನು ನಿವಾರಿಸಲೇಬೇಕೆಂದು ಫೋರ್ಟಿಸ್ ಆಸ್ಪತ್ರೆಯ ವೈದ್ಯರುಗಳು ಅಭಿಪ್ರಾಯಪಟ್ಟರು.

ಫೋರ್ಟಿಸ್ ಆಸ್ಪತ್ರೆಯ ಹೃದ್ರೋಗ ತಜ್ಞರ ತಂಡವು ಕರೋನರಿ ಆರ್ಟರಿ ಬೈಪಾಸ್ ಗ್ರಾಫ್ಟ್ ಸರ್ಜರಿ ಕೈಗೊಂಡು, ರಕ್ತನಾಳದ ಅಡೆತಡೆಗಳನ್ನು ನಿವಾರಿಸಿದರು. ಒಂದು ತಿಂಗಳ ಚೇತರಿಕೆಯ ನಂತರ, ಡಾ. ಮೋಹನ್ ಕೇಶವ ಮೂರ್ತಿ ಮತ್ತು ಅವರ ತಂಡದವರು ಈ ವಯೋವೃದ್ಧರಿಗೆ ಲೇಸರ್ ಟಿಯುಆರ್‌ಪಿ (ಟ್ರಾನ್ಸ್ ಯುರೇಥ್ರಲ್ ರಿಸೆಕ್ಷನ್ ಆಫ್ ಪ್ರಾಸ್ಟೇಟ್) ಚಿಕಿತ್ಸೆ ಕೈಗೊಂಡರು. ಲೇಸರ್ ಚಿಕಿತ್ಸೆಯಿಂದ ಹೆಚ್ಚುವರಿ ಅಂಗಾಂಶವು ಆವಿಯಾಗುವಂತೆ ಮಾಡುವುದರಿಂದ ಸ್ಥಳಾವಕಾಶ ಉಂಟಾಗಿ ಮೂತ್ರವಿಸರ್ಜನೆಗೆ ದಾರಿಯಾಗುತ್ತದೆ. "ಇದು ಕನಿಷ್ಟ ಛೇದ ವಿಧಾನವಾಗಿದ್ದು ಅಂಗಾಂಶಗಳನ್ನು ಕತ್ತರಿಸಬೇಕಾದ ಸಾಂಪ್ರದಾಯಿಕ ವಿಧಾನಕ್ಕಿಂತ ಅನುಕೂಲಕರವಾಗಿದೆ. ಇಲ್ಲಿ ರಕ್ತ ಸೋರಿಕೆಯಾಗುವುದು ಬಹಳ ಕಡಿಮೆಯಾದ್ದರಿಂದ ರೋಗಿಯು ಬೇಗನೆ ಚೇತರಿಸಿಕೊಳ್ಳಬಹುದು. ಎಲ್ಲಕ್ಕೂ ಮಿಗಿಲಾಗಿ ಇದು ಅಧಿಕ ರಿಸ್ಕ್‌ನ ರೋಗಿಗಳಿಗೆ ಅತ್ಯಂತ ಅನುಕೂಲಕರವಾಗಿದೆ" ಎಂದು ಡಾ. ಕೇಶವ ಮೂರ್ತಿ ಹೇಳುತ್ತಾರೆ.

**For more information, contact:**

Fortis Hospitals, Opposite to IIMB, **Bannerghatta Road,** Bangalore - 76. Tel: 96633 67253 / 080 6621 4444
Email: care.bng@fortishealthcare.com

Fortis Hospitals, 14, **Cunningham Road,** Bangalore - 560 052. Tel: 96868 60310 / 080 4199 4444
Email: connect2cg@fortishealthcare.com
Website: www.fortishealthcare.com

Advt